# ನೆನವುದೆನ್ನ ಮನಂ, ಮುದ್ದಣನ ಜನ್ಮಭೂಮಿಯಂ...

**ಮಹಾಕವಿಯಾಗಿ ಕನ್ನಡ ಸಾರಸ್ವತ ಪ್ರಪಂಚದಲ್ಲಿ ನಕ್ಷತ್ರದಂತೆ ಮಿನುಗಿದ 'ನವೋದಯ ಕನ್ನಡದ ಮುಂಗೋಳಿ' ಮುದ್ದಣನ ಊರು ನಂದಳಿಕೆಯಲ್ಲಿ ಕನ್ನಡದ ಕಾರ್ಯನಿರ್ವಹಿಸುವ ಸದವಕಾಶ ನನ್ನ ಪಾಲಿಗೆ ಒದಗಿಬಂದಿತ್ತು.**

■ ನಂದಳಿಕೆ ಬಾಲಚಂದ್ರರಾವ್

ನೆನಪುಗಳೆಲ್ಲವೂ ಸವಿಯಲ್ಲ. ಆದರೆ ಜೀವನದಲ್ಲಿ ಕೆಲವು ನೆನಪುಗಳಂತೂ ಅತ್ಯಂತ ಸಿಹಿ, ಭವ್ಯ ಇತಿಹಾಸದ ಒಂದು ಪುಟದಲ್ಲಿ ಒಂದು ಸಾಲು ಮಾತ್ರವಾದರೂ ಒಂದು ಪರಂಪರೆಯಾಗಿ ನನ್ನ ಮನೆತನದ ಹೆಸರು ನಮೂದಾಗುತ್ತದೆ. ಅಂತಹ ಮನೆತನದ ಒಬ್ಬ ಆದರ್ಶ ಶಿಕ್ಷಕ ಎನ್.ಸುಬ್ಬರಾವ್ ಅವರ ಮಗನಾಗಿ ಹುಟ್ಟಿದ್ದು ನನ್ನ ಸೌಭಾಗ್ಯ. ಮುದ್ದಣ ಜಯಂತಿ ಆಚರಿಸುತ್ತಿರುವ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ನಂದಳಿಕೆಯಲ್ಲಿರುವ ಶ್ರೀ ಮಹಾಲಿಂಗೇಶ್ವರ ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆದದ್ದು ನನ್ನ ಸೌಭಾಗ್ಯ.

ನನಗೆ ಜೀವನದ ಘಟನೆಗಳನ್ನು ಹಿಂದಿರುಗಿ ನೋಡುವ ಕುತೂಹಲ. ಅದರಂತೆ ಪೂರ್ವ ಪರಂಪರೆಯನ್ನು ತಿಳಿಯುವ ಕೌತುಕ. ಈ ಆಸಕ್ತಿಯ ಅವಲೋಕನ ಕಾರಣವಾಗಿ ನನಗೆ ಸಿಕ್ಕಿದ್ದು ನಂದಳಿಕೆಯ ಮಣ್ಣಿನಲ್ಲಿ ಹುಟ್ಟಿ ಕೇವಲ ಮೂವತ್ತೊಂದು ವರ್ಷ ಬದುಕಿ ಮಹಾಕವಿಯಾಗಿ ಕನ್ನಡ ಸಾರಸ್ವತ ಪ್ರಪಂಚದಲ್ಲಿ ನಕ್ಷತ್ರದಂತೆ ಮಿನುಗುತ್ತಿರುವ ಕವಿ ಮುದ್ದಣ. 'ನವೋದಯ ಕನ್ನಡದ ಮುಂಗೋಳಿ' ಎಂದೇ ಖ್ಯಾತನಾದ ಈ ಪುಣ್ಯಾತ್ಮನ ಹೆಸರನ್ನು ಬಳಸಿಕೊಂಡು ಕುಗ್ರಾಮವಾಗಿದ್ದ ನಂದಳಿಕೆಯನ್ನು ಅಭಿವೃದ್ಧಿಪಡಿಸುವ ಕನಸು ಕಂಡವರು ನಾನು ಮತ್ತು ನನ್ನ ಮಿತ್ರರು.

ನಮ್ಮ ಕನಸು ಕನಸಾಗಿ ಉಳಿಯಲಿಲ್ಲ. ನನಸಾಯಿತು. ಇದೇ ನೆನಪು ಸವಿಯಾದುದು. ಮುದ್ದಣ ವನ, ಕೊಳವೆಬಾವಿ ವಿದ್ಯುತ್, ದೂರವಾಣಿ, ಡಾಂಬರ್ ರಸ್ತೆ, ಬಸ್ಸು ಸೌಲಭ್ಯ, ಮೂರು ದಶಕದ ಕನಸಿನ ಮುದ್ದಣ ಸ್ಮಾರಕ ಭವನ, ಗ್ರಂಥಾಲಯ. ಆಸ್ಪತ್ರೆ ಮುಂತಾದ ಸೌಲಭ್ಯಗಳು ನಂದಳಿಕೆಗೆ ಒದಗಿ ಬಂತು.

ಮುದ್ದಣನ ಹೆಸರಿನಲ್ಲಿ ಕವಿ ಸಮ್ಮೇಳನ, ಯಕ್ಷಗಾನ, ಅವಧಾನ, ಕಾವ್ಯವಾಚನ ಪ್ರವಚನ, ಗಂಜೀಫ ಪ್ರದರ್ಶನ ಮುಂತಾದ ಸಾಹಿತ್ಯಿಕ ಕಾರ್ಯಗಳು ನಡೆದಾಗ ನಮ್ಮೂರ ಕವಿಯ ಪರಿಚಯವಾಯಿತು ನಮ್ಮ ಜನ ಸಂತಸಪಟ್ಟರು.

ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಧರ್ಮದರ್ಶಿಗಳಾದ ಎನ್.ಸದಾಶಿವ ಹೆಗ್ಡೆ ಮತ್ತು ಎನ್.ಸುಂದರರಾಮ ಹೆಗ್ಡೆ ಮಾರ್ಗದರ್ಶನದಲ್ಲಿ




ಮುದ್ದಣ ಸ್ಮಾರಕ ರೈತ ಸಂಘದ ಸಹ ಸದಸ್ಯರೊಂದಿಗೆ ಲೇಖಕರು...
(ಕುಳಿತವರಲ್ಲಿ ಎಡದಿಂದ ಮೂರನೆಯವರು)

ನಂದಳಿಕೆ ಮೂಡುಮನೆ ಎನ್.ಭಾಸ್ಕರ್ ರಾವ್, ಎಂ.ಅನಂತಪದ್ಮನಾಭ ರಾವ್, ಎನ್.ಪದ್ಮನಾಭ ರಾವ್ ನೇತೃತ್ವದಲ್ಲಿ 1958ರಲ್ಲಿ ಕವಿ ಮುದ್ದಣ ಸ್ಮಾರಕ ರೈತ ಯುವಕ ಸಂಘ ಸ್ಥಾಪನೆಗೊಂಡು ಊರ ಅಭಿವೃದ್ಧಿಗೆ ಚಾಲನೆ ದೊರಕಿತು. 1958ರಲ್ಲಿ ಕವಿ ಮುದ್ದಣ ಸ್ಮಾರಕ ರಚನೆಗೆ ಶಿಲಾನ್ಯಾಸಗೊಂಡಿತು.

1979ರಲ್ಲಿ ಕರ್ಣಾಟಕ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದ ನಂದಳಿಕೆ ಮೂಡುಮನೆ ಮಂತ್ರಿ ಮನೆತನದ ನಂದಳಿಕೆ ಬಾಲಚಂದ್ರ ರಾವ್ ಸ್ಥಾಪಕ ಗೌರವಾಧ್ಯಕ್ಷತೆಯಲ್ಲಿ, ಕಾನಬೆಟ್ಟಿನ ಎನ್. ದಿವಾಕರ್ ಶೆಟ್ಟಿ ಸ್ಥಾಪಕ ಅಧ್ಯಕ್ಷತೆಯಲ್ಲಿ, ಎನ್. ನಾರಾಯಣ ಭಟ್ ಸ್ಥಾಪಕ ಕಾರ್ಯದರ್ಶಿತ್ವದಲ್ಲಿ ಮುದ್ದಣ ಸ್ಮಾರಕ ರೈತ ಸಂಘದೊಂದಿಗೆ ವಿಲೀನಗೊಂಡಿತು.

ಎನ್.ಸುಂದರರಾಮ ಬಂಗೇರ, ಎನ್. ಸುಹಾಸ್ ಹೆಗ್ಡೆ, ಸುದೇಶ್ ಹೆಗ್ಡೆ, ಸಂದೇಶ್ ಹೆಗ್ಡೆ, ಚಂದ್ರಶೇಖರ ರಾವ್, ನಾರಾಯಣ ಭಟ್ ಸಹೋದರರು, ವಿ.ಕೆ.ರಾವ್, ಸುಧಾಕರ್ ರಾವ್, ಚಂದ್ರಹಾಸ ಚೌಟ, ವಸಂತ, ಸತೀಶ್, ಪ್ರವೀಣ, ಮನೋಜ್, ಉದಯ ಕುಮಾರ್, ಶೇಖರ್ ಶೆಟ್ಟಿ, ಅರುಣ ಕುಮಾರ್, ಸುಧಾಕರ್ ಶೆಟ್ಟಿ, ಜನಾರ್ದನ ಶಾಸ್ತ್ರಿ, ಬೈಪಡಿತ್ತಾಯ ಮೊದಲಾದ ಸಮಾನ ಮನಸ್ಕರ ಸಮರ್ಪಣಾಭಾವದ ಸಹಕಾರ, ಜನಪ್ರತಿನಿಧಿಗಳ ಮಾರ್ಗದರ್ಶನ, ಮುಂಬಯಿಯ ನಂದಳಿಕೆ ಉದ್ಯಮಿಗಳ ಸಹಕಾರ, ಊರವರ ಪ್ರೀತಿ ವಿಶ್ವಾಸಗಳಿಂದ ರಜತ ಸಂಭ್ರಮ, ಮುದ್ದಣನ ವಿಶೇಷ ಅಂಚೆ ಚೀಟಿ ಲೋಕಾರ್ಪಣೆ ಮುಂತಾದ ಜನಹಿತ ಕಾರ್ಯಗಳಿಂದ 4 ದಶಕಗಳ ನಿಸ್ವಾರ್ಥ ಸೇವೆಯಿಂದ ಧನ್ಯತೆ ಸಂತೃಪ್ತಿ ಇದೆ. 2014ರಿಂದ ಮಿತ್ರ ಮಂಡಳಿಯ ಅಧ್ಯಕ್ಷರಾಗಿ ಎನ್.ಸುಹಾಸ್ ಹೆಗ್ಡೆ ಹಾಗೂ ರವಿರಾಜ್ ಭಟ್ ಸಾರಥ್ಯದಲ್ಲಿ ಮುನ್ನಡೆಯುತ್ತಿರುವುದು ಧನ್ಯತಾ ಭಾವಮೂಡಿದೆ.

ಅಂದ ಹಾಗೆ ಫೆ.15 ಮುದ್ದಣ ಕವಿಯ 118ನೇ ಪುಣ್ಯತಿಥಿ. ■